**ಎರಡನೆ ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು ಪ್ರ.ವರ್ಗ ಗೋಕಾಕ ಇವರ ನ್ಯಾಯಾಲಯದಲ್ಲಿ ಸಾಃ ಗೋಕಾಕ.**

ಸಿ.ಸಿ. ನಂ.**468/2016**

ಆರೋಪಿತನ ಹೆಸರುಃ 1) ಅಣ್ಣಪ್ಪ ಮಾಯಪ್ಪ ಮಣ್ಣಿಕೇರ
ಸಾಃ ಧರ್ಮಟ್ಟಿ ಗ್ರಾಮ,
ತಾಃ ಗೋಕಾಕ, ಜಿಃ ಬೆಳಗಾವಿ

**ಕಲಂ 313 ಸಿ.ಆರ್.ಪಿ.ಸಿ. ಕೆಳಗೆ ಆರೋಪಿತರ ಹೇಳಿಕೆ**

ಪ್ರಃ **1** ನಿನ್ನ ವಿರುದ್ದ ನ್ಯಾಯಾಲಯದಲ್ಲಿ ಅಭಿಯೋಜಕರ ಪರ ವಿಚಾರಣೆ ಮಾಡಿಸಿದ ಸಾಕ್ಷಿಗಳು ನೀಡಿರುವ ಹೇಳಿಕೆಗಳ ಬಗ್ಗೆ ನಿಮಗೆ ತಿಳಿದಿದೆಯಾ?

ಉಃ

ಪ್ರಃ **2** ಪ್ರಾಸಾ.1 ನಾರಾಯಣ ಶಂಕರರಾವ ದೇಶಪಾಂಡೆ ರವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನಂದರೆ, ತಾನು 2000 ರಿಂದ 2012 ರವರೆಗೆ ಗೋಕಾಕ ಅಬಕಾರಿ ವಲಯದಲ್ಲಿ ಅಬಕಾರಿ ಪೇದೆ ಅಂತಾ ಕೆಲಸ ಮಾಡಿರುತ್ತೇನೆ.

ದಿಃ 20-07-2012 ರಂದು ಚಾಸಾ-1 ರವರು ಚಾಸಾ-4 ರವರನ್ನು ಕರೆದು ಪಂಚರನ್ನು ಕರೆಸಲು ಹೇಳಿದಂತೆ ಚಾಸಾ-4 ರವರು ಚಾಸಾ-2 ಮತ್ತು 3 ಪಂಚರನ್ನು ಕರೆದುಕೊಂಡು ಬಂದಿರುತ್ತಾರೆ. ಚಾಸಾ-1 ರವರು ಬಾತ್ಮಿ ವಿಷಯವನ್ನು ತಮಗೆ ತಿಳಿಸಿದರು. ನಂತರ ನಮ್ಮ ಸರಕಾರಿ ಜೀಪ ನಂ. ಕೆಎ-22 ಜಿ 454 ನೇದ್ದರಲ್ಲಿ ನಾವೆಲ್ಲರೂ ಕೂಡಿ ಸುಲಧಾಳ ಮತ್ತು ಹುದಲಿ ನಡುವೆ ಬ್ರಿಜ್ ಹತ್ತಿರ ಹೋಗಿ ಮರೆಯಲ್ಲಿ ನಮ್ಮ ವಾಹನವನ್ನು ನಿಲ್ಲಿಸಿ ಅಲ್ಲಿರುವ ಕಬ್ಬಿನ ಹೊಲದಲ್ಲಿ ನಿಂತು ನಾವು ವಾಚ್ ಮಾಡಿ ನೋಡಿದಾಗ ಸದರಿ ಬ್ರಿಜ್ ಮೇಲೆ ಹುದಲಿ ಕಡೆಯಿಂದ ಒಂದು ದ್ವಿಚಕ್ರ ವಾಹನ ಬಂತು. ದೂರದಿಂದ ತಮಗೆ ಸದರಿ ದ್ವಿಚಕ್ರ ವಾಹನದ ಪೆಟ್ರೋಲ್ ಟ್ಯಾಂಕ ಮೇಲೆ ಕರಿ ಬಣ್ಣದ ವಸ್ತು ಇಟ್ಟುಕೊಂಡು ಬರುವದು ಕಂಡು ಬಂದಿತು. ನಾವು ಕೈಮಾಡಿ ನಿಲ್ಲಿಸಲು ದ್ವಿಚಕ್ರ ವಾಹನದ ಚಾಲಕ ಸಮವಸ್ತ್ರದಲ್ಲಿ ಇದ್ದ ನಮ್ಮನ್ನು ನೋಡಿ ವಾಹನವನ್ನು ಬಿಟ್ಟು ಕಬ್ಬಿನ ಹೊಲದಲ್ಲಿ ಓಡಿ ಹೋದನು. ನಾವು ಬೆನ್ನಟ್ಟಿದರೂ ಅವನು ಸಿಗಲಿಲ್ಲ. ಚಾಸಾ-1, ತಾನು ಮತ್ತು ಚಾಸಾ-4 ಕೂಡಿ ವಾಹನ ಹತ್ತಿರ ಬಂದು ಪಂಚರ ಸಮಕ್ಷಮ ತಪಾಸಣೆ ಮಾಡಲಾಗಿ ಸದರಿ ವಾಹನ ಸುಜುಕಿ ಮಾಕ್ಸ 100 ಕೆಎ-23 ಎಫ್ 6299 ಅಂತಾ ಇದ್ದು, ಒಂದು ಕರಿ ಬಣ್ಣದ ರಬ್ಬರ ಟ್ಯೂಬನಲ್ಲಿ 25 ಲೀಟರ ಕಳ್ಳಭಟ್ಟಿ ಸರಾಯಿ ಇರುವದು ಕಂಡು ಬಂದಿತು. ಚಾಸಾ-1 ರವರು ಪಂಚರಿಗೆ ತಿಳಿಸಿ ಅದರಲ್ಲಿಂದ 180 ಎಂ.ಎಲ. ಕಳ್ಳಭಟ್ಟಿ ಸರಾಯಿಯನ್ನು ರಸಾಯನಿಕ ಪರೀಕ್ಷೆಗೆ ತೆಗೆದು ಬಿಳಿ ಬಟ್ಟೆಯಿಂದ ಸುತ್ತಿ ಶೀಲ್ ಮಾಡಿ ಅಬಕಾರಿ ಕಚೇರಿಯ ಅರಗಿನ ಶೀಲ್ ಹಾಕಿ ಚಾಸಾ-1 ಮತ್ತು ಪಂಚರ ಸಹಿವುಳ್ಳ ಚೀಟಿಯನ್ನು ಅಂಟಿಸಿದರು. ಸ್ಥಳದಲ್ಲಿ ಪಂಚನಾಮೆಯನ್ನು 11-30 ಗಂಟೆಯಿಂದ 12-30 ಗಂಟೆಯವರೆಗೆ ಮಾಡಿದ್ದು ಇರುತ್ತದೆ. ವಾಹನ ಮತ್ತು ಮುದ್ದೆ ಮಾಲಿನೊಂದಿಗೆ ಕಚೇರಿಗೆ ಬಂದು

ಚಾಸಾ-1 ರವರು ಸ.ತ ಪಿರ್ಯಾದಿ ನೀಡಿರುತ್ತಾರೆ. ಈ ಕುರಿತು ನಾನು ಹೇಳಿಕೆ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ3 ಪ್ರಾಸಾ. 3 ಗಂಗಾಧರ ಎಚ್ ಮುದ್ದೇನ್ನವರ ರವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ, ತಾನು ನಾನು 20.06.2011 ರಿಂದ 26.02.2013 ರವರೆಗೆ ಗೋಕಾಕ ವಲಯದಲ್ಲಿ ಅಬಕಾರಿ ನೀರಿಕ್ಷಕರು ಅಂತಾ ಗೋಕಾಕ ವಲಯದಲ್ಲಿ ಕಾರ್ಯನಿರ್ವಹಿಸಿರುತ್ತೇನೆ.

ದಿಃ 20-07-2012 ರಂದು ಸುಮಾರು 11.30 ಗಂಟೆಗೆ ಬಂದ ಖಚಿತ ಬಾತ್ಮಿ ಬಂದ ಅದಾರದ ಮೇರೆಗೆ ಅಬಕಾರಿ ಉಪಆಯಕ್ತರು ಬೆಳಗಾವಿ ಅಬಕಾರಿ ಉಪಅಧೀಕ್ಷಕರು ರಾಮದುರ್ಗದ ವಿಬಾಗ ಅವರ ಮಾರ್ಗದರ್ನದಲ್ಲಿ ನಾನು ನನ್ನ ಸಿಬ್ಬಂದಿ ಹಾಗೂ ಪಂಚರು ಕೂಡಿಕೊಂಡು ವಾಹನ ಸಂ. ಕೆಎ 22 G 2554 ನೆದ್ದರಲ್ಲಿ ಕುಳಿತುಕೊಂಡು ಬೆಳಗಾವಿ ಗೋಕಾಕ ರಸ್ತೆಯ ಹುದಲಿ ಬ್ರಿಡ್ಜ ಹತ್ತಿರ ರಸ್ತೆ ಕಾವಲು ಮಾಡುತಿದ್ದಾಗ ಹುದಲಿ ಕಡೆಯಿಂದ ಸುಳದಾಲ ಕಡೆಗೆ ಒಂದು ದ್ವಿ ಚಕ್ಕ ವಾಹನದ ಮೇಲೆ ಇಬ್ಬರುಾ ವ್ಯಕ್ತಿಗಳು ಒಂದು ಕಪ್ಪು ಬಣ್ಣದ ರಬ್ಬರ ಟ್ಯೂಬನ್ನು ಬೈಕಿ ನ ಟ್ಯಾಂಕಿನ ಮೆಲೆ ಇಟ್ಟು ಕೊಂಡು ಬರುತ್ತಿರುವುದನ್ನು ನೋಡಿ ನನ್ನ ಸಿಬ್ಬಂದಿಗಳು ಸದರಿ ವ್ಯಕ್ತಿ ಗಳ ವಾಹನವನ್ನು ನಿಲ್ಲಿಸಲಾಗಿ, ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಸದರಿ ವ್ಯಕ್ತಿಗಳು ತನ್ನ ವಾಹನವನ್ನು ಸ್ಥಳದಲ್ಲಿಯೇ ಬಿಟ್ಟು ಓಡಿಹೋಗಿರುತ್ತಾರೇ.

ನಂತರ ನಾವು ಗುನ್ನಾ ಜಾಗಕ್ಕೆ ಹೋಗಿ ನೋಡಲಾಗಿ, ಗುನ್ನಾ ಜಾಗೆಯಲ್ಲಿ ಶೋದನಾ ಸಮುಚ್ಚಿತ ವಾರಂಟ ಬರೆದು ವಾಹನವನ್ನು ಪರಿಶೀಲಿಸಿ ಅದು ಕೆಂಪು ಬಣ್ಣದ ಸುಜುಕಿ ಮ್ಯಾಕ್ಸ ಆರ 100 ಎಂದು ಕೆಎ 23 ಇ 6299 ಎಂದು ನಮೂದಾಗಿತ್ತು, ಅದರ ಪಕ್ಕದಲ್ಲಿಯೇ ಬಿದ್ದ ಟ್ಯೂಬನ್ನು ಪರೀಶೀಲಿಸಲಾಗಿ ಸದರಿ ಟ್ಯೂಬ ಅಂದಾಜು 25 ಲೀ ಸಾಮರ್ಥ್ಯ ವುಳ್ಳ ಕಳ್ಳಬಟ್ಟಿ ಸಾರಾಯಿ ತುಂಬಿದ ಟ್ಯೂಬ ಆಗಿತ್ತು.

ನಂತರ ಪಂಚರ ಸಮಕ್ಷಮ ಅವುಗಳನ್ನು ದಸ್ತಗಿರಿ ಮಾಡಿ, ಟ್ಯೂಬ ನಲ್ಲಿದ್ದ ಕಳ್ಳಬಟ್ಟಿ ಸಾರಾಯಿ ಪೈಕಿ 180 ಎಮ್ ಎಲ್ ನ ಕಳ್ಳಬಟ್ಟಿ ಸಾರಾಯಿಯನ್ನು ರಾಸಾಯನಿಕ ಪರೀಕ್ಷೆಗೆ ಬೇರ್ಪಡಿಸಿ ಅದಕ್ಕೆ ಸರ್ಕಾರಿ ಸೀಲನಿಂದ ಸೀಲ್ ಮಾಡಿ ಬಟ್ಟೆ ಸುತ್ತಿ ದಾರದಿಂದ ಬಿಗಿದು ಬಂದ ಮಾಡಲಾಯಿತು.

ನಂತರ ಪಂಚರ ಸಮಕ್ಷಮ ಮಹಜರ್ ಕ್ರಮ ಜರೂಗಿಸಲಾಯಿತು . ಸದರಿ ಮಹಜರ್ 11.45 ರಿಂದ ಮದ್ಯಾಹನ 12.45 ಗಂಟೆಯವೆರ ಕೈಗೊಳ್ಳಲಾಯಿತು. ಮಹಜರ್ ಸ್ಥಳದಲ್ಲಿಯೇ ಬರೆದು ಪಂಚರ ಸಹಿವುಳ್ಳ ಕಚೇರಿಯನ್ನು ಅಂಟಿಸಲಾಯಿತು. ನಂತರ ದ್ವಿಚಕ್ರ ವಾಹನ, ಕಳ್ಳಬಟ್ಟಿ ಸಾರಾಯಿ ತುಂಬಿಂದ ರಬ್ಬರ ಟ್ಯೂಬನ್ನು ತೆಗೆದುಕೊಂಡು ಮುಂದಿನ ಕ್ರಮಕ್ಕಾಗಿ ಕಚೇರಿಗೆ ಬರುತ್ತಿದ್ದೇವೆ ಎಂದು ತಿಳಿಸಿ, ನಂತರ ಕಚೇರಿಗೆ ಬಂದು ಓಡಿ ಹೋದ ಆರೋಪಿತರ ವಿರುದ್ದ ಹಾಗೂ ದ್ವಿಚಕ್ರ ಮಾಲಿಕರ ಪತ್ತೆ ಹಚ್ಚಿ ಬಂದಿಸಬೇಕಾಗಿದೆ ಎಂದು ನ್ಯಾಯಾಲಯಕ್ಕೆ ದೂರನ್ನು ಬರೆದು ಅಪರಾದ ಸಂ. 2/2012 / 13 ದಿಃ 20.07.2012 ಎಂದು ದಾಖಲಿಸಲಾಯಿತು. ನಂತರ ಮಾನ್ಯ ನ್ಯಾಯಾಲಯಕ್ಕೆ ಪ್ರವವಯನ್ನು ಸಲ್ಲಿಸಿರುತ್ತೇನೆ.

ನಂತರ ರಾಸಾಯನಿಕ ಪರೀಕ್ಷೆಗಾಗಿ ಬೇರ್ಪಡಿಸಿದ ಸ್ಯಾಂಪಲ ಸಾರಾಯಿಯನ್ನು 03.11.2012 ರಂದು ಚಾಸಾ 6 ಮತ್ತು 7 ರವರ ಮುಖಾಂತರ ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿಕೊಡಲಾಯಿತು. ನಂತರ ಅವರು ರಾಸಾಯನಿಕ ಪರಿಕ್ಷೆಯ ವರದಿಯನ್ನು ಹಾಗೂ ಸ್ಯಾಂಪಲ್ ಬಾಟಲಿಯನ್ನು ದಿಃ07.11.2012 ರಂದು ಮರಳಿ ತಂದು ಕಚೇರಿಗೆ ಒಪ್ಪಿಸಿದರು. ಈ ಪ್ರಕರಣದಲ್ಲಿ ಜಪ್ತಿ ಪಡಿಸಿದ ದ್ವಿಚಕ್ರ ವಾಹನ ಮಾಲಿಕರು ವಿವರ ವನ್ನು ಪಡೆಯಲು ಸಾರಿಗೆ ಅದಿಕಾರಿಗಳು , ಚಿಕ್ಕೋಡಿರವರಿಗೆ ದಿಃ 25.07.2012 ಮುಖೇನ ಪತ್ರ ಬರೆದೆನು. ನಂತರ ಅವರಿಂದ ದಿಃ 10.10.2012 ರಂದು ವಾಹನದ ಮಾಲಿಕರ ಮಾಹಿತಿ ಪ್ರತಿ ನಮ್ಮ ಕಚೇಗೆ ತಲುಪಿರುತ್ತದೆ.

ಸದರಿ ಮಾಹಿತಿ ಪತ್ರದ ಅನ್ವಯ ವಾಹನ ಮಾಲಿಕರಾದ 2 ನೇ ಆರೋಪಿಗೆ ಅದೇ ದಿನದಂದು ನೋಟಿಸ್ ನೀಡಲಾಗಿ ಅವರು ದೀ 13.10.2012 ರಂದು ತಮ್ಮ ಹೇಳಿಕೆಯನ್ನು ಲಿಖಿತ ಮೂಲಕ ಸಲ್ಲಸಿರುತ್ತಾರೆ. ಸದರಿ ಹೆಳಿಕೆ ಪರಿಶಿಲಿಸಲಾಗಿ ಅವರು ಹೇಳಿರುವಂತಹ ಹೇಳಿಕೆಯಲ್ಲಿ ನ ಅಂಶಗಮ ಸಮಂಜಸವಾಗಿ ಕಂಡು ಬರದೆ ಇರುವುರಿಂದ ಅವರನ್ನು ಈ ಪ್ರಕರಣದಲ್ಲಿ 2 ನೇ ಆರೋಪಿಯಾಗಿ ಸೇರಿಸಲಾಯಿತು. ನಂತರ ದಾಳಿಯಲ್ಲಿ ಬಾಗವಹಿಸಿದ ಚಾಸಾ 4 ಹಾಗೂ ಚಾಸಾ 5 ರವರ ಹೇಳಿಕೆ ಪಡೆದುಕೊಂಡು, ವಾಹನದ ಮಾಲಿಕರ ವಿರುದ್ದ ದೀ 29.11.2012 ರಂದು ತನಿಖೆ ಪೂರ್ಣಗೋಳಿಸಿ ದಾಖಲಾತಿಗಳೊಂದಿಗೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಎಂದು ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ ?

ಉಃ

ಪ್ರಃ **4** ಬೇರೆ ಏನಾದರೂ ಹೇಳುವುದಿದೆಯಾ ?

ಉಃ

ಪ್ರಃ **5** ನಿಮ್ಮ ಪರವಾಗಿ ಸಾಕ್ಷಿಗಳನ್ನು ಅಥವಾ ದಾಖಲಾತಿಗಳನ್ನು ಹಾಜರು ಪಡಿಸುವಿರಾ **?**

ಉಃ

(ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಅವನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವರಿಂದ ಬಂದ ಉತ್ತರಗಳ್ನು ನನ್ನ ಸ್ವ ಅಕ್ಷರಗಳಲ್ಲಿ ಬರೆದುಕೊಂಡೆ ಅಂತಾ ದೃಡಿಕರಿಸುತ್ತೇನೆ)

**ಗೋಕಾಕ**

**ದಿಃ 24.06.2026** **II ಹೆಚ್ಚುವರಿ ನ್ಯಾ.ದಂ.ಪ್ರ.ವರ್ಗ, ಗೋಕಾಕ.**